ಲ್ಯಾಂಡ್ ಬ್ಯಾಂಕ್ ಯೋಜನೆಯಡಿ ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಮುಳವಾಡ ಗ್ರಾಮದಲ್ಲಿ 4456-01 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 16.01.2010ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1), 1(3) ಮತ್ತು 28(1)ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ಜಂಟಿ ಅಳತೆ ಕಾರ್ಯ ನಡೆಯುತ್ತಿದ್ದು ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇದೆ.

(ಆ) ಕೂಡಗಿ ವಿದ್ಯುತ್ ಸ್ಥಾವರದ (ಎನ್.ಟಿ.ಪಿ.ಸಿ) ಯೋಜನೆಗಾಗಿ ಸ್ವಾಧೀನಪಡಿಸಿರುವ 2898-36 ಎಕರೆ ಜಮೀನಿನ ಪೈಕಿ ಮೊದಲನೇ ಹಂತದ 1923-29 ಎಕರೆ ಜಮೀನಿಗೆ ಬಹುಪಾಲು ಭೂಪರಿಹಾರ ಪಾವತಿ ಕಾರ್ಯ ಮುಕ್ತಾಯಗೊಂಡಿದೆ. ಎರಡನೇ ಹಂತದ 1015-07 ಎಕರೆ ಜಮೀನಿನ ಭೂ ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ.

ಲ್ಯಾಂಡ ಬ್ಯಾಂಕ್ ಯೋಜನೆಯಡಿ ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಮುಳವಾಡ ಗ್ರಾಮದ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಭೂ ದರ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

ನೀರಾವರಿ ಕಾಮಗಾರಿಗಳ ಪ್ರಗತಿ

332 (574) ಶ್ರೀ ಬೆಳ್ಳುಬ್ಬಿ ಸಂಗಪ್ಪ (ಬಸವನಬಾಗೇವಾಡಿ) ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿ ಕಾಮಗಾರಿಯು ಈಗ ಯಾವ ಹಂತದಲ್ಲಿದೆ:

(ಆ) ಈ ಕಾಮಗಾರಿ ಪೂರ್ಣಗೊಳಿಸಲು ತೆಗೆದುಕೊಳ್ಳುವ ಕಾಲಾವಧಿ ಎಷ್ಟು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

(ಅ) ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳನ್ನು ಈ ಕೆಳಗೆ ನೀಡಿದೆ.

ಮುಳವಾಡ ಏತ ನೀರಾವರಿ ಯೋಜನೆ:

ಮುಳವಾಡ ಏತ ನೀರಾವರಿ ಹಂತ-3 ರಡಿಯ ಬಳೂತಿ ಮೊದಲನೇ ಹಾಗೂ ಹನುಮಾಪೂರ ಎರಡನೆಯ ಮುಖ್ಯ ಸ್ಥಾವರಗಳಲ್ಲಿಯ ಬಾಕಿ ಕಾಮಗಾರಿಗಳಿಗಾಗಿ ಹಾಗೂ ಮಸೂತಿ 3ನೇ ಮುಖ್ಯಸ್ಥಾವರದ (ಸಿವಿಲ್ ಮತ್ತು ಎಲೆಕ್ಟ್ರೋ ಮೆಕ್ಯಾನಿಕಲ್ ಕಾಮಗಾರಿ ಒಳಗೊಂಡ) ಕಾಮಗಾರಿಗಳಿಗೆ ಪ್ರಸ್ತಾವನೆ ಹಾಗೂ ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದ್ದು, ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗುತ್ತಿದೆ.

ಚಿಮ್ಮಲಗಿ ಏತ ನೀರಾವರಿ ಯೋಜನೆ:

ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ಮುಖ್ಯಸ್ಥಾವರದ ಕಾಮಗಾರಿಯನ್ನು (ಇಂಟೇಕ್ ಚಾನಲ್, ಜಾಕ್‌ವೆಲ್, ಪಂಪಿಂಗ್ ಮೆಶನರಿ, ರೈಸಿಂಗ್ ಮೇನ್, ಸಬ್ ಸ್ಟೇಷನ್, ಡೆಲಿವರಿ ಚೇಂಬರ್ ಒಳಗೊಂಡ) ರೂ. 48.50 ಕೋಟಿ ಟೆಂಡರ್ ಮೊತ್ತಕ್ಕೆ ಟರ್ನ್ ಕೀ ಆಧಾರದ ಮೇಲೆ ಕೈಗೆತ್ತಿಕೊಂಡು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಜಾಕ್‌ವೆಲ್ ನಿರ್ಮಾಣ ಕಾಮಗಾರಿಯು ಪಂಪ್ ಅಳವಡಿಕೆ ಮಟ್ಟದವರೆಗೆ ಪೂರ್ಣಗೊಂಡಿರುತ್ತದೆ. ಇಂಟೇಕ್ ಕಾಲುವೆ ಹಾಗೂ ಡೆಲಿವರಿ ಚೇಂಬರ್ ಕಾಮಗಾರಿಯು ಸಹಾ ಪೂರ್ಣಗೊಂಡಿದೆ. ರೈಸಿಂಗ್ ಮೇನ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.

ಮುಂದುವರೆದು, 2.10 ಕಿ.ಮೀ. ಉದ್ದದ ಕಂಬೈನ್ಡ್ ಕಾಲುವೆ ಹಾಗೂ ಪಶ್ಚಿಮ ಕಾಲುವೆ ಕಿ.ಮೀ.0.00 ರಿಂದ 20.00ರವರೆಗಿನ (ವಿತರಣಾ ಕಾಲುವೆ 1 ರಿಂದ 9 ಒಳಗೊಂಡಂತೆ) 3 ಪ್ಯಾಕೇಜುಗಳಡಿ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿದೆ.

ಪಶ್ಚಿಮ ಕಾಲುವೆ ಕಿ.ಮೀ. 20.00 ರಿಂದ 54.00 ವರೆಗಿನ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆಗಳು ಅಂತಿಮಗೊಳಿಸಲಾಗಿದೆ.

ಪೂರ್ವ ಕಾಲುವೆ ಕಿ.ಮೀ 0.00 ರಿಂದ 20.00 ರವರೆಗಿನ ಕಾಮಗಾರಿಗಳಿಗೆ 2 ಪ್ಯಾಕೇಜುಗಳಡಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗುತ್ತದೆ. ಪೂರ್ವ ಕಾಲುವೆ ಕಿ.ಮೀ. 20.00 ರಿಂದ 132.00 ರವರೆಗಿನ ಕಾಮಗಾರಿಗಳಿಗೆ ಅಂದಾಜು ಪತ್ರಿಕೆ ತಯಾರಿಕೆಗೆ ಕ್ರಮ ಜರುಗಿಸಲಾಗುತ್ತಿದೆ. ಮುಂದುವರೆದು, ಡೋಣಿ ನದಿಯ ನಂತರದಲ್ಲಿ ಬರುವ ನಾಗಠಾಣ ಮತ್ತು ಕೋರವಾರ ಬ್ರಾಂಚ್ ಕಾಲುವೆಗಳಡಿ ಬರುವ ಅಚ್ಚುಕಟ್ಟು ಕ್ಷೇತ್ರದ ಪ್ರಾಥಮಿಕ ಸರ್ವೆ ಸಮೀಕ್ಷಣೆ ಪೂರ್ಣಗೊಂಡಿರುತ್ತದೆ.

(ಆ) ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿ ಯೋಜನೆಗಳು ಹಂತ ಹಂತವಾಗಿ ಕೈಗೊಂಡು ಪೂರ್ಣಗೊಳಿಸಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುವುದು.